ಅನುಬಂದ–೧

ಕ್ರಮಸಂಖ್ಯೆ	ಜಿಲ್ಲೆ		ನಿರ್ಮಿಸಲಾದ ಮನೆಗಳು
೧.	ಬೆಂಗಳೂರು	...	೨೭೦೮
೨.	ಕೋಲಾರ	...	೨೪೨೮
೩	ತುಮಕೂರು	...	೧೫೨೭
೪.	ಶಿವಮೊಗ್ಗ	...	೩೩೫೧
೫.	ಚಿತ್ರದುರ್ಗ	...	೨೭೦೧
೬.	ಮೈಸೂರು	...	೩೩೩೮
೭.	ಮಂಡ್ಯ	...	೨೫೫೬
೮.	ಕೊಡಗು	...	೯೩೪
೯.	ದಕ್ಷಿಣ ಕನ್ನಡ	...	೩೫೭೬
೧೦	ಹಾಸನ	..	೨೧೭೦
೧೧.	ಚಿಕ್ಕಮಗಳೂರು	...	೨೦೬೯
೧೨.	ಬೆಳಗಾವಿ	...	೨೭೬೯
೧೩.	ಧಾರವಾಡ	...	೨೩೮೨
೧೪.	ಬಿಜಾಪುರ	...	೨೬೮೭
೧೫.	ಕಾರವಾರ	...	೩೫೯೯
೧೬.	ಗುಲ್ಬರ್ಗ	...	೩೧೫೧
೧೭.	ಬಿದರೆ	...	೧೭೨೯
೧೮.	ರಾಯಚೂರು	...	೩೨೭೦
೧೯.	ಬಳ್ಳಾರಿ	...	೨೫೫೮
			೪೯೫೮೩

ಸಿಂಧೂರಿನಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯವನ್ನು ಸ್ಥಾಪಿಸುವ ಬಗ್ಗೆ

೧೦೫೪. ಶ್ರೀ ಎಂ. ಮಲ್ಲಪ್ಪ (ಸಿಂಧನೂರು) ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧನೂರಿನಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯವನ್ನು ಸ್ಥಾಪಿಸುವುದು ಸರಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ೧೯೮೪–೮೫ನೇ ವರ್ಷದಲ್ಲಿಯೇ ಈ ಕಾರ್ಯವನ್ನು ಪ್ರಾರಂಭಿಸಲಾಗುವುದೇ ?

ಶ್ರೀ ಎ. ಲಕ್ಷ್ಮಿಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮತ್ತು ಸಾರ್ವಜನಿಕ ಕುಂದು ಕೊರತೆಗಳ ಮಂತ್ರಿಗಳು)

ಅ) ಇಲ್ಲ. ಉಚ್ಚನ್ಯಾಯಾಲಯದ ಅಭಿಪ್ರಾಯವನ್ನು ಪಡೆಯಲು ಬರೆಯಲಾಗಿದ್ದು, ಉತ್ತರದ ನಿರೀಕ್ಷಣೆ ಇದೆ.

ಆ) ಉದ್ಭವಿಸುವುದಿಲ್ಲ.

ಕೆ. ಆರ್. ನಗರ ತಾಲ್ಲೂಕು ಚುಂಚನ ಕಟ್ಟೆಯಲ್ಲಿ ಪ್ರವಾಸಿ ಕೇಂದ್ರ ಮಂಜೂರು ಮಾಡುವುದು

೧೦೭೭. ಶ್ರೀ ಎನ್. ಸಂಜಪ್ಪ (ಕೆ. ಆರ್. ನಗರ) ಮಾನ್ಯ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣರಾಜನಗರ ತಾಲ್ಲೂಕು ಚುಂಚನ ಕಟ್ಟೆಯಲ್ಲಿ ಕಾವೇರಿ ನದಿಯು ೧೯೪೮ ಎತ್ತರದಿಂದ ಕೆಳಕ್ಕೆ ಧುಮುಕುವ ತಾಣವಾಗಿದ್ದು ಯಾತ್ರಾರ್ಥಿಗಳನ್ನು ಆಕರ್ಷಿಸುವ ಕ್ಷೇತ್ರವಾಗಿರುವುದರಿಂದ ಅದು ಪ್ರವಾಸಿ ಕೇಂದ್ರವಾಗಲು ಯೋಗ್ಯವಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ನಿರ್ಧಾರವನ್ನೇನಾದರೂ ಕೈಗೊಂಡಿದ್ದಾರೆಯೇ ?

ಇ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣವೇನು ?

ಶ್ರೀ ಎಂ. ರಘುಪತಿ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ಹೌದು.

ಆ) ಹಣದ ಕೊರತೆಯಿಂದಾಗಿ ಸದ್ಯಕ್ಕೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ.

ಇ) ಆರ್ಥಿಕ ಕೊರತೆ ಇರುವುದರಿಂದ ೧೯೮೩–೮೪ನೇ ಮತ್ತು ೧೯೮೪–೮೫ನೇ ಸಾಲಿನ ಯೋಜನೆಯಲ್ಲಿ, ಸದರಿ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಅಳವಡಿಸಿಕೊಂಡಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಸುಧಾರಿಸಿದ ನಂತರವೇ ಮುಂಬರುವ ವರ್ಷಗಳಲ್ಲಿ ಅಭಿವೃದ್ಧಿ ಪಡಿಸಲು ಪ್ರಯತ್ನಿಸಲಾಗುವುದು.

ಆಟೋರಿಕ್ಷಾಗಳಲ್ಲಿ ಮೂರು ಜನ ಪ್ರಯಾಣಿಕರಿಗೆ ಅನುಮತಿ

೧೩೭೬. ಎಸ್. ಸೂರ್ಯನಾರಾಯಣರಾವ್ (ವರ್ತೂರು) ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಟೋರಿಕ್ಷಾಗಳಲ್ಲಿ ೩ ಜನರ ಪ್ರಯಾಣಕ್ಕೆ ಅನುಮತಿ ನೀಡುವ ಸಲಹೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಆ) ೩ ಜನರಿಗೆ ಈ ರೀತಿ ಅನುಮತಿ ನೀಡುವುದರಿಂದ ಪ್ರತಿ ಆಟೋರಿಕ್ಷಾಕ್ಕೆ ತಗಲುವ ಹೆಚ್ಚಿನ ಪೆಟ್ರೋಲ್ ವೆಚ್ಚ ದುರಸ್ತಿ ವೆಚ್ಚ ಮತ್ತು ಟೈರ್ ವೆಚ್ಚ ಇವುಗಳನ್ನು ಸರ್ಕಾರದವರು ಕೂಲಂಕುಶವಾಗಿ ಲೆಕ್ಕಾಚಾರ ಮಾಡಿರುವರೆ ?

ಇ) ಈಗಿನ ಆಟೋರಿಕ್ಷಾಗಳ ಇಂಜಿನ್ ಮೂಡರಿ ಮತ್ತು ಅಶ್ವಶಕ್ತಿ, ಪ್ರಯಾಣಿಕರು ಕುಳಿತು ಕೊಳ್ಳಲು ಇರುವ ಜಾಗ ಇವು ಮೂರು ಜನರಿಗೆ ಪ್ರಯಾಣಕ್ಕೆ ಅವಕಾಶ ನೀಡುವುದೇ ?

ಈ) ಹಾಗಿದ್ದಲ್ಲಿ ಆಟೋರಿಕ್ಷಾಗಳಲ್ಲಿ ೩ ಜನರ ಪ್ರಯಾಣಕ್ಕೆ ಸರ್ಕಾರದವರು ಅನುಮತಿ ನೀಡುವರೇ ?

ಶ್ರೀ ಎಂ. ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).—

ಅ) ಇಲ್ಲ.

ಆ) ಈ ಬಗ್ಗೆ ವೈಜ್ಞಾನಿಕವಾದ ಅಧ್ಯಯನ ನಡೆದಿಲ್ಲ. ಆದರೂ ಅಂತಿಮ ತೀರ್ಮಾನ ತೆಗೆದುಕೊಳ್ಳುವಾಗ ಈ ವಿಚಾರದ ಬಗ್ಗೆಯೂ ಪರಿಶೀಲಿಸಲಾಗುವುದು.

ಇ) ರಿಕ್ಷಾದ ಇಂಜಿನ್ನಿಗೆ ಮೂರು ಪ್ರಯಾಣಿಕರನ್ನು ಕೊಂಡೊಯ್ಯುವ ಸಾಮರ್ಥ್ಯ ಇದೆ. ಆಟೋರಿಕ್ಷಾದ ಒಳಗಡೆ ಇರುವ ಸ್ಥಳದಲ್ಲಿ ಮೂರು ಜನರ ಪ್ರಯಾಣಿಕರು ಪ್ರಯಾಣ ಮಾಡಲು ವ್ಯವಸ್ಥೆ ಮಾಡಬಹುದು.

ಈ) ವಿಷಯವು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ.

೧೩೭೮ ಶ್ರೀ ಬಿ. ಬೈರಪ್ಪಾಜಿ (ತುರುವೆಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ರಾಜ್ಯದ ಪ್ರತಿ ತಾಲ್ಲೂಕಿನಲ್ಲಿಯೂ ೧೦೦ ಜನ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ನೀರಾವರಿ ಬಾವಿಗಳನ್ನು ತೋಡಿಸಿಕೊಟ್ಟು ಅನುಕೂಲ ಕಲ್ಪಿಸಿಕೊಡಲು ಕೇಂದ್ರ ಸರಕಾರದ ಆದೇಶ ಬಂದಿರುವುದು ನಿಜವಲ್ಲವೇ ?